ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ. ನಂ. 1326/2019**

ಸಿ.ಡಬ್ಲೂ-6 ಪಿ.ಡಬ್ಲೂ -5

ದಿಃ **20.03.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ದೇವರಾಜು |
| ಗಂಡ/ತಂದೆಯ ಹೆಸರು | ಈರಹುಚ್ಚೆಗೌಡ |
| ವಯಸ್ಸು | ಸುಮಾರು 57 ವರ್ಷ |
| ಕೆಲಸ | ಆರಂಭ |
| ವಾಸಸ್ಥಳ | ಮಂಟಿ ಕೊಪ್ಪಲು ಗ್ರಾಮ |

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ಮತ್ತು 2 ಗೊತ್ತು. ಆರೋಪಿತರು ಗೊತ್ತು. 2019 ರಲ್ಲಿ ಚಾಸಾ-2 ಹಾಗೂ ಲೋಕೇಶ್ ರೆಡ್ಡಿ ಜಮೀನು ಒತ್ತುವರಿ ವಿಚಾರವಾಗಿ ನನ್ನನ್ನು ಚಾಸಾ-5, 7 ಮತ್ತು 8 ರವರನ್ನು ನ್ಯಾಯ ಹೇಳುವಂತೆ ಕರೆಸಿದ್ದರು. ಆರೋಪಿ ಹಾಗೂ ಚಾಸಾ-1 ರವರಿಗೆ ಅಳತೆ ಮಾಡಿಸಿಕೋಳ್ಳಿ ಎಂದು ಹೇಳಿ ವಾಪಾಸ ಕಳಿಸಿ ಬಂದಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿತರು ಮತ್ತು ಚಾಸಾ-1 ಮತ್ತು 2 ರವರ ನಡುವೆ ಯಾವುದೇ ಗಲಾಟೆ ಆಗಿಲ್ಲ.
ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಪಿಸಬೇಕಾಗಿ ಕೋರಿದ್ದು, ಆಲಿಸಿ ಅನುಮತಿಸಲಾಯಿತು.

**ಪಾಟೀ ಸವಾಲು ಸ.ಸ.ಅ ರವರಿಂದಃ**

ದಿಃ 09.03.2019 ರಂದು ಚಾಸಾ-1 ರವರು 1 ನೇ ಆರೋಪಿ ಸ.ನಂ. 42/ಪಿ6 ರ ಜಮೀನಿಗೆ ತಂತಿ ಬೇಲಿ ಹಾಕಿಕೊಂಡಿದ್ದು, ಅದನ್ನು ಕೇಳಲು ಹೋದಾಗ ಗಲಾಟೆ ಮಾಡಿರುವುದಾಗಿ ತೀರ್ಮಾನ ಮಾಡಿಕೊಡಿ ಎಂದು ನಿಮ್ಮನ್ನು ಹಾಗೂ ಚಾಸಾ-5, 7 ಮತ್ತು 8 ರವರನ್ನು ಕೇಳಿರುತ್ತಾರೆಂದರೆ ಸರಿ.
ದಿಃ 10.03.2019 ರಲ್ಲಿ ನೀವು ಹಾಗೂ ಚಾಸಾ-5, 7 ಮತ್ತು 8 ರವರೊಂದಿಗೆ ಚಾಸಾ-1 ರವರೊಂದಿಗೆ ಜಮೀನ ಬಳಿ ಬೆಳಿಗ್ಗೆ 8 ಗಂಟೆಗೆ ಹೋಗಿರುತ್ತೀರಿ ಎಂದರೆ ಸರಿ. ಚಾಸಾ-1, 1 ನೇ ಆರೋಪಿ ತನಗೆ ಸೇರಿದ ಜಮೀನಿಗೆ ಹಾಕಿದ ಬೆಲೆಯನ್ನು ನಿಮ್ಮಗಳಿಗೆ ತೋರಿಸಿರುತ್ತಾರೆಂದರೆ ಸರಿ. ಆಗ 1 ನೇ ಆರೋಪಿ ಬಂದು ಗ್ರಾಮದ ಮುಖ್ಯಸ್ಥರನ್ನು ಕರೆತಂದರೆ ಜಮೀನು ಬಿಡುತ್ತೀನಾ ಬೋಳಿ ಮಗನೆ ಎಂದು ಕಲ್ಲಿನಿಂದ ಚಾಸಾ-1 ರವರ ತಲೆಯ ಮುಂಭಾಗಕ್ಕೆ ಹೊಡೆದಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. 2 ಮತ್ತು 3 ನೇ ಆರೋಪಿತರು ಸೇರಿಕೊಂಡು ಚಾಸಾ-1 ರವರನ್ನು ತಬ್ಬಿಹಿಡಿದು ಕೈ ಯಿಂದ ಮೈಕೈಗೆ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ.

ಚಾಸಾ-2 ರವರು ಬಿಡಿಸಲು ಮುಂದಾದಾಗ 4 ನೇ ಆರೋಪಿ ಕೈ ಯಿಂದ ಚಾಸಾ-4 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ನೀವು ಹಾಗೂ ಚಾಸಾ-5, 7 ಮತ್ತು 8 ಎಲ್ಲಾ ಸೇರಿ ಜಗಳ ಬಿಡಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಸೇರಿ ಚಾಸಾ-1 ಹಾಗೂ 2 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಹೊರಟುಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ 11.03.2019 ರಂದು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸದರಿ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿತರು ನಿಮ್ಮ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರು ಶ್ರೀ ಎಸ್.ಜಿ. ವಕೀಲರಿಂದಃ**

ಚಾಸಾ-2 ರವರು ನಿಮ್ಮನ್ನು ನ್ಯಾಯ ಹೇಳಲು ಕರೆದಿಲ್ಲ ಎಂದರೆ ಸರಿಯಲ್ಲ. ಯಾವ ತಾರೀಕಿನಂದು ಕರೆದಿದ್ದರು ಎಂದು ನಿಮಗೆ ಗೊತ್ತಾ ಎಂದರೆ ನಿಖರವಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನೀವಾಗಲಿ ಹಾಗೂ ಚಾಸಾ-5, 7 ಮತ್ತು 8 ರವರಾಗಲಿ ಯಾರು ನ್ಯಾಯ ಮಾಡಲು ಹೋಗಿಲ್ಲ ಎಂದರೆ ಸರಿಯಲ್ಲ. ನೀವು ಸರ್ವೆ ಮಾಡಿಸಿಕೊಳ್ಳುವಂತೆ ಯಾರಿಗೂ ಹೇಳಿಲ್ಲ ಎಂದರೆ ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.